<u>ಸಾಕ್ಷಿಯನ್ನು ದಿನಾಂಕಃ **27.02.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಯು.ಎಸ್. ವಕೀಲರಿಂದ:</u>

ನಮ್ಮ ತಂದೆಗೆ 3 ಜನ ಹೆಣ್ಣು ಮಕ್ಕಳು, 3 ಜನ ಗಂಡು ಮಕ್ಕಳು ಇರುತ್ತೇವೆ. ನಾನು ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ದಾವೆಯನ್ನು ದಾವಾ ಆಸ್ತಿಯ ಮಾಲೀಕ ಎಂದು ಸಲ್ಲಿಸಿದ್ದೇನೆ. ನಾನು ಈ ದಾವೆಯನ್ನು ಸರ್ವೇ ನಂ.220/2 ಬಿ 1 ಎಕರೆ 28 ಗುಂಟೆಗೆ ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಮತ್ತು ವಾದ ಪತ್ರದಲ್ಲಿಯೂ 1 ಎಕರೆ 28 ಗುಂಟೆ ಎಂದು ನಮೂದು ಮಾಡಿಸಿದ್ದೇನೆ. ಸದರಿ 1 ಎಕರೆ 28 ಗುಂಟೆಯ ಚೆಕ್ಕು ಬಂದಿ ಪೂರ್ವಕ್ಕೆಃ ಹಳ್ಳ, ಪಶ್ಚಿಮಕ್ಕೆಃ ಚಾನಲ್ , ಉತ್ತರಕ್ಕೆಃ ಬಾಬು ಮತ್ತು ದಕ್ಷಿಣಕ್ಕೆಃ ಕೃಷ್ಣ. ನಾನು ತುಮಕೂರಿನಲ್ಲಿ 15 ವರ್ಷಗಳಿಂದ ವಾಸವಿದ್ದೇನೆ. ನನ್ನ ತಂದೆಗೆ ಮಾಳಿಗೆ ಮನೆ ಇತ್ತು. ಸದರಿ ಮಾಳಿಗೆ ಮನೆ ನನ್ನ ತಂದೆ ಹೆಸರಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮಗೆ ಬೇರೆ ಮನೆ ಇದ್ದ ಬಗ್ಗೆ ಪಂಚಾಯಿತಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳ ಪ್ರಕಾರ ಒಂದು ಮನೆ 15X20 ಇರುತ್ತದೆ. ಇನ್ನೊಂದು 18X25 ಇರುತ್ತದೆ. ಸದರಿ ಮನೆಗಳು 2023 ರಲ್ಲಿ ನನ್ನ ಹೆಸರಿಗೆ ಖಾತೆಯಾಗಿರುತ್ತದೆ. ನಾನು ಮೇಲೆ ಹೇಳಿದ ಎರಡು ಮನೆಗಳಿಗೆ ದಾವೆ ಸಲ್ಲಿಸಿರುತ್ತೇನೆ. ನಾನು ಯಾವುದೇ ಪಂಚಾಯಿತಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಲು

ಪರವಾನಗಿ ಪಡೆದಿರುವುದಿಲ್ಲ. ದಾವಾ ಆಸ್ತಿ ನನ್ನ ತಂದೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಹೆಸರಿನಲ್ಲಿ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ದಾವಾ ಆಸ್ತಿಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ನಾನು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಜೀರ ಅಹ್ಮದ ಎಂದರೆ ನಮ್ಮ ದೊಡ್ಡಪ್ಪನ ಮೊಮ್ಮಕ್ಕಳಾಗಿದ್ದು, ಪ್ರತಿವಾದಿಯು ನಜೀರ ಅಹ್ಮದರವರ ಅಣ್ಣನಾಗಿರುತ್ತಾರೆ. ನಜೀರ ಅಹ್ಮದ ಕೇವಲ ನನ್ನ ದೊಡ್ಡಪ್ಪನ ಕಡೆಯಿಂದ ಸಂಬಂಧನಾಗಿರುತ್ತಾರೆ. ನಜೀರ ಅಹ್ಮದ ಮತ್ತು ಪ್ರತಿವಾದಿ ಜಿಡ್ಡಿಗೆರೆ ಗ್ರಾಮದಲ್ಲಿ ವಾಸವಿದ್ದಾರೆ.

ದಾವಾ ಆಸ್ತಿ ಪ್ರತಿವಾದಿಯ ಆಸ್ತಿಗೆ ಸೇರಿದ್ದು ಎಂದರೆ ಸರಿಯಲ್ಲ. ನಜೀರ ಅಹ್ಮದ ಮತ್ತು ಪ್ರತಿವಾದಿ ಪಂಚಾಯಿತಿಯಿಂದ ಪರವಾನಗಿ ಪಡೆದು ಮನೆ ಕಟ್ಟಿ ವಾಸವಿದ್ದಾರೆ ಎಂದರೆ ಸಾಕ್ಷಿಯು ತಾನು ಕಟ್ಟಿದ ಮನೆಯಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ನಜೀರ ಅಹ್ಮದ ಮತ್ತು ಪ್ರತಿವಾದಿಯ ಮನೆ ಹಿಂದೆ ಮತ್ತು ಮುಂದೆ ಇರುತ್ತದೆ. ಪ್ರತಿವಾದಿಯ ಒಡಹುಟ್ಟಿದವರು 4 ಜನ ಇರುತ್ತಾರೆ. ಸದರಿ 4 ಜನರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.2 ನ್ನು ನಾನು ಹಾಜರುಪಡಿಸಿದ್ದೇನೆ. ನಿಪಿ.2 ರಲ್ಲಿ ಘನಿ ಸಾಬ್ ರವರ 4 ಜನ ಮಕ್ಕಳ ಹೆಸರು ನಮೂದು ಇದೆ ಎಂದರೆ ಸರಿ. ಸದರಿಯವರ ಹೆಸರು ಎಂ.ಆರ್.12/2001-02 ರ ವಿಭಾಗದಂತೆ ಆಗಿರುತ್ತದೆ ಎಂದರೆ

ಸರಿಯಲ್ಲ. ನಿಪಿ.2 ರಲ್ಲಿ ನನ್ನ ಹೆಸರಿಗೆ 1 ಎಕರೆ 28 ಗುಂಟೆ ನಮೂದಾಗಿದೆ ಎಂದರೆ ಸರಿ. ನಿಪಿ.2 ರ ಸರ್ವೇ ನಂಬರ್ ನಲ್ಲಿ 1 ಎಕರೆ 28 ಗುಂಟೆ ವಿಸ್ತೀರ್ಣ ಇತ್ತು. ನಿಪಿ.2 ರಲ್ಲಿ ನಮೂದಾಗಿರುವ ಮಹಮ್ಮದ ಹುಸೇನ್ ರವರು ನಮ್ಮ ತಾತ. ನಿಪಿ.2 ರ ಆಸ್ತಿ ನನ್ನ ತಾತನ ಹೆಸರಿನಲ್ಲೇ ಇದ್ದರು ನನ್ನ ತಂದೆಗೆ ಬಂದಿದ್ದು, ನಂತರದಲ್ಲಿ ನನಗೆ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಮತ್ತು ಅವರ ಸಹೋದರರ ಹೆಸರಿನಲ್ಲಿ ಖಾತೆಯಾಗಿದ್ದು, ಈ ನ್ಯಾಯಾಲಯ ಮತ್ತು ಉಪವಿಭಾಗಾಧಿಕಾರಿಗಳ ಮುಂದೆ ಪ್ರಶ್ನಿಸಿದ್ದು, ಅವು ಬಾಕಿ ಇವೆ. ನಾನು ಸಲ್ಲಿಸಿದ್ದ ಆರ್.ಎ.ಕೆ.ಯು.ಎನ್.264/2021 ಪ್ರಕರಣವು ದಿನಾಂಕಃ05.12.2024 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಪರಿಹಾರವೇ ಬೇರೆ ಈ ಪ್ರಕರಣದ ಪರಿಹಾರವೇ ಬೇರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಖಾತೆ ಪ್ರಶ್ನಿಸಬೇಕಾದರೆ ಇ.ಒ. ನ್ಯಾಯಾಲಯದಲ್ಲಿ ಪ್ರಶ್ನಿಸಬೇಕು ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಉಪವಿಭಾಗಾಧಿಕಾರಿಗಳ ಮುಂದೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳ ಮುಂದೆ ನಿಪಿ.2 ರಲ್ಲಿ ನಮೂದಾಗಿರುವ ಎಂ.ಆರ್.12 ಮತ್ತು 15 ನ್ನು ಪ್ರಶ್ನಿಸಿರುತ್ತೇನೆ. ನಾನು ಕೋರಿರುವ ಪರಿಹಾರಕ್ಕೆ ತಕ್ಕಂತೆ ನ್ಯಾಯಾಲಯದ ಶುಲ್ಕ ಪಾವತಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ಊಹೆ ಮೇಲೆ ದಾವಾ ಆಸ್ತಿ ಎಂದು ತೋರಿಸಿ ಈ

ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.